## **1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**OS-167/2015** **PW-1**

**ದಿಃ 06.10.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ ಎಸ್ ಬಿ ವಕೀಲರಿಂದಃ**

**1.** ಬ್ಲಾಕ ನಂಃ 68 ಒಟ್ಟು ಕ್ಷೇತ್ರ 51 ಎಕರೆ 23 ಗುಂಟೆಯನ್ನು ಕೆ ಐ ಎ ಡಿ ಬಿ ರವರು ಭೂಸ್ವಾದೀನ ಮಾಡಿರುತ್ತಾರೆಂದರೆ ಸರಿ. ಈ ಬಗ್ಗೆ ಯಾವಾಗ ಐತೀರ್ಪು ಆಯಿತು ಮತ್ತು ಎಷ್ಟು ಹಣ ಐತೀರ್ಪುನಲ್ಲಿ ಇತ್ತು ಎಂಬುದನ್ನು ತಮ್ಮ ಅಸಲರ್ಜಿಯಲ್ಲಿ ತಿಳಿಸಿಲ್ಲ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಶೆಡ್ಯೂಲ ಡ ಆಸ್ತಿಯಲ್ಲಿ ಭೂಸ್ವಾದೀನದಿಂದ ಬರತಕ್ಕ ಹಣ ಎಂದು ತಿಳಿಸಿದ್ದು ಎಷ್ಟು ಹಣ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನನಗೆ ಬರಬೇಕಾದ ಭಾಗವನ್ನು ಕೊಡಿ ಎಂದು ನುಡಿಯುತ್ತಾರೆ. ನನ್ನ ವಕೀಲರು ಕೇಳಿದಂತಹ ದಾಖಲೆಗಳನ್ನು ನಾನು ಅವರಿಗೆ ಒದಗಿಸಿದ್ದು ಅದರ ಆದಾರದ ಮೇಲೆ ಬರೆದಿರುತ್ತಾರೆ. ನಾನು ನನ್ನ ವಕೀಲರಿಗೆ ಎಷ್ಟು ಭಾಸ್ವಾದೀನದಿಂದ ಹಣ ಬರುತ್ತದೆಂದು ಕೇಳಿರುವದಿಲ್ಲ. ಭೂಸ್ವಾದೀನವಾದ ದಾಖಲೆಗಳನ್ನು ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿಯು ಈ ಬಗ್ಗೆ ನನಗೇನೂ ಗೊತ್ತಿಲ್ಲ ಎನ್ನುತ್ತಾರೆ. ತಮ್ಮ ಮಾಗಣಿಯಲ್ಲಿ ಭೂಸ್ವಾದೀನದಿಂದ ಇಷ್ಟು ಹಣ ಬಂದಿದ್ದು ಅದರಲ್ಲಿಯೂ ಭಾಗ ಕೊಡಬೇಕೆಂದು ಇರುವದಿಲ್ಲ ಎಂದರೆ ಗೊತ್ತಿಲ್ಲ. ನಾನು ಈ ದಿನ ನ್ಯಾಯಾಲಯಕ್ಕೆ ಬರುವ ಪೂರ್ವದಲ್ಲಿ ಯಾವೆಲ್ಲಾ ಕಾಗದ ಪತ್ರಗಳನ್ನು ಹಾಜರುಪಡಿಸಿರುತ್ತೇನೆ ಹಾಗೂ ನನ್ನ ಪ್ರಕರಣ ಏನೆಂಬುದನ್ನು ನನ್ನ ವಕೀಲರ ಮುಖಾಂತರ ಕೇಳಿ ತಿಳಿದುಕೊಳ್ಳದೇ ಸಾಕ್ಷಿ ನುಡಿಯಲು ಬಂದಿರುತ್ತೇನೆ. ಭೂಸ್ವಾದೀನ ಆಗಿದೆಯೋ ಇಲ್ಲವೋ ಎಂಬ ಬಗ್ಗೆ ಕೆ ಐ ಎ ಡಿ ಬಿ ಮತ್ತು ಕಟ್ಟಿ ರವರ ಕುಟುಂಬದ ನಡುವೆ ವ್ಯಾಜ್ಯ ಇರುತ್ತದೆಂದರೆ ಸರಿ. ಈ ರೀತಿ ಇದ್ದರೂ ಯಾವ ರೀತಿ ಭೂಸ್ವಾದೀನವಾದ ಹಣದಲ್ಲಿ ಭಾಗ ಬರಬೇಕೆಂದು ಕೋರಿರುತ್ತೇನೆಂದರೆ ಸಾಕ್ಷಿಯು ಕೆ ಐ ಎ ಡಿ ಬಿ ರವರು ನನ್ನ ಮಾವನಿಗೆ ಸ್ವಲ್ಪ ಹಣ ಕೊಟ್ಟಿದ್ದು ಅದರ ಆದಾರದ ಮೇಲೆ ಕೇಳಿರುತ್ತೇನಂದು ನುಡಿಯುತ್ತಾರೆ. ಈ ಬಗ್ಗೆ ಏನಾದರೂ ದಾಖಲೆಯನ್ನು ನೀಡಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎಂದು

ನುಡಿಯುತ್ತಾರೆ. ಕೆ ಐ ಎ ಡಿ ಬಿ ಮತ್ತು ಕಟ್ಟಿ ಕುಟುಂಬದ ನಡುವೆ ಇದ್ದಭೂಸ್ವಾದೀನ ವ್ಯಾಜ್ಯವು ಬಗೆಹರಿಯುವದಿಲ್ಲ ಎಂದು ತಿಳಿದು ಬೇರೆಯವರಿಗೆ ಕೊಟ್ಟು ಹಣ ಪಡೆದಿರುತ್ತೀರಿ ಎಂದರೆ ಗೊತ್ತಿಲ್ಲ.

2. ಇತ್ತೀಚೆಗೆ ತಾವು ಹೊಸಮನೆ ಕಟ್ಟಿ ಅಲ್ಲಿ ವಾಸವಾಗಿರುತ್ತೀರಿ ಎಂದರೆ ಸಾಕ್ಷಿಯು ನನ್ನ ಭಾವನವರು ಕಟ್ಟಿ ನನಗೆ ವಾಸ ಮಾಡಲು ಅನುಮತಿ ಕೊಟ್ಟಿರುತ್ತಾರೆಂದು ನು ಡಿಯುತ್ತಾರೆ. ನಾನು ಈ ದಾವೆಯನ್ನು ದಾವಾ ಆಸ್ತಿಗಳಲ್ಲಿ ಯಾವಾದೇ ಸರಸನಿರಸ ಭಾಗ ಆಗದ ಕಾರಣ ಸಮನಾದ ಭಾಗವನ್ನು ಕೊಡಿಸಿ ಎಂದು ಹೊಸಮನೆಯನ್ನು ಹಿಡಿದುಕೊಂಡು ಈ ದಾವೆಯಲ್ಲಿ ಪರಿಹಾರ ಕೋರಿರುತ್ತೇನೆ. ಒಂದು ವೇಳೆ ನ್ಯಾಯಾಲಯವು ನಾನು ಹಾಕಿದ ದಾವೆಯನ್ನು ತೀರ್ಮಾನ ಮಾಡಿ ನಾನು ವಾಸ ಮಾಡುತ್ತಿರುವ ಹೊಸ ಮನೆಯನ್ನು ಬೇರೆದವರ ಭಾಗಕ್ಕೆ ಕೊಟ್ಟರೆ ತಾವು ಬಿಟ್ಟುಕೊಡಲು ತಯಾರಿರುತ್ತೀರಾ ಎಂದರೆ ಸಾಕ್ಷಿಯು ಇರುತ್ತೇನೆ ಮತ್ತು ಕೊಡುತ್ತೇನೆ ನುಡಿಯುತ್ತಾರೆ.

3. ಮಲ್ಲಪ್ಪ ನನ್ನ ಭಾವನ ಮಗ ಆಗಿರುತ್ತಾರೆ. ಮಲ್ಲಪ್ಪನಿಗೆ ಸೇರಿದ ದೊಡ್ಡ ಜನರಲ ಸ್ಟೋರ್ಸ ತಾರೀಹಾಳ ಗ್ರಾಮದಲ್ಲಿರುತ್ತದೆಂದರೆ ಸರಿ. ಅವರನು ಸುಮಾರು ವಾರ್ಷಗದಿಂದ ಕಿರಾಣಿ ಅಂಗಡಿಯನ್ನು ನಿರ್ವಹಿಸಿಕೊಂಡು ಬಂದಿರುತ್ತಾರೆಂದರೆ ಸಾಕ್ಷಿಯು ನಾನೂ ಮಾಡಿಕೊಂಡು ಬಂದಿರುತ್ತೇನೆ ಎನ್ನುತ್ತಾರೆ. ತಾವು ನಿರ್ವಹಿಸಿದ ಬಗ್ಗೆ ಸರಕಾರಕ್ಕೆ ತಾವು ತಮ್ಮ ಹೆಸರಿನಲ್ಲಿ ತುಂಬಿದ ಟ್ಯಾಕ್ಸ ಮತ್ತು ತಮ್ಮ ಹೆಸರಿನಲ್ಲಿರುವ ಪರವಾನಿಗೆ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿಯು ಹಾಜರುಪಡಿಸಿರುತ್ತೇನೆಂದು ನುಡಿಯುತ್ತಾರೆ. ಯಾವ ವರ್ಷದಲ್ಲಿ ತಮ್ಮ ಹೆಸರಿನಲ್ಲಿ ಪರವಾನಿಗೆ ಪಡೆದಿರುತ್ತೀರಿ ಮತ್ತು ಯಾವ ವರ್ಷದಿಂದ ಯಾವ ರ್ಷದವರಿಗೊ ತಮ್ಮ ಹೆಸರಿನಲ್ಲಿ ಟ್ಯಾಕ್ಸ ತುಂಬಿರುತ್ತೀರಿ ಎಂದರೆ ಸಾಕ್ಷಿಯು ನನ್ನ ಮಾವ ತುಂಬಿರುತ್ತಾರೆಂದು ನುಡಿಯುತ್ತಾರೆ. ಅಂಗಡಿಗೆ ಸಂಬಂದಿಸಿದ ಎಲ್ಲಾ ದಾಖಲೆಗಳು ಮಲ್ಲಪನ ಹೆಸರಿನಲ್ಲಿವೆ ಎಂದರೆ ಗೊತ್ತಿಲ್ಲ. ಅಂಗಡಿಯ ಬಗ್ಗೆ ಬರೆಸಬೇಕಾದರೆ ತಾವು ದಾಖಲೆಗಳನ್ನು ನೋಡಿ ಬರೆಸಿರುತ್ತೀರಾ ಅಥವಾ ಹಾಗೇಯೇ ಬರೆಸಿರುತ್ತೀರಾ ಅದು ಇಂಗ್ಲೀಷನಲ್ಲಿದ್ದದ್ದು ನನಗೆ ಗೊತ್ತಾಗದ ಕಾರಣ ನಮ್ಮ ವಕೀಲರಿಗೆ ಕೊಟ್ಟಿದ್ದು ಅವರು ನೋಡಿ ಬರೆದಿರುತ್ತಾರೆಂದು ನುಡಿಯುತ್ತಾರೆ. ಮಲ್ಲಪ್ಪ ಬಸಪ್ಪ ಕಟ್ಟಿ ರವರು ಅಂಗಡಿಯನ್ನು ವೈಯಕ್ತಿಕವಾಗಿ

ನಿರ್ವಹಿಸಿಕೊಂಡು ಬಂದಿರುತ್ತಾರೆಂದರೆ ಸರಿಯಲ್ಲ. ಯಾವ ನಾತೇದಿಂದ ಮಲ್ಲಪ್ಪನವರು ನಿರ್ವಹಿಸಿಕೊಂಡು ಬಂದಿರುತ್ತಾರೆಂದರೆ ಸಾಕ್ಷಿಯು ಗೊತ್ತಿಲ್ಲ ಎನ್ನುತ್ತಾರೆ. ಈ ಕಿರಾಣಿ ಅಂಗಡಿಯಲ್ಲಿ ದೊಡ್ಡ ಪ್ರಮಾಣದಲ್ಲಿ ವ್ಯವಹಾರಗಳು ಆಗುತ್ತವೆಂದರೆ ಸರಿ. ಅದರಿಂದ ಮಲ್ಲಪ್ಪನಿಗೆ ಉತ್ತಮವಾದ ಆದಾಯ ಇರುತ್ತದೆಂದರೆ ಸರಿ. ಹಿರಿಯರಿಂದ ಬಂದಂತಹ ಆಸ್ತಿಗಳಲ್ಲಿ ಕಟ್ಟಿ ಕುಟುಂಬಕ್ಕೆ ಯಾವದೇ ನೀರಾವರಿ ಜಮೀನು ಇರುವದಿಲ್ಲ ಎಂದರೆ ಸರಿಯಲ್ಲ. ಬೋರವೆಲ್ಲಗಳು ಇರುವದು ಸರ್ವೆ ನಂಃ 162/2, 162/3 ಎಂದರೆ ಸರಿ. ಸಾಕ್ಷಿ ಮುಂದುವರೆದು ಇವುಗಳ ಜೊತೆಯಕಿಲ್ಲಿ ಸರ್ವೆ ನಂಃ 75 ಮತ್ತು 77 ರಲ್ಲಿ ಸಹ ಒಟ್ಟು ಮೂರು ಬೋರಗಳು ಇರುತ್ತದೆಂದು ನುಡಿಯುತ್ತಾರೆ. ಸರ್ವೆ ನಂಃ 162/1 ಮತ್ತು 162/3 ನ್ನು 2006 ರಲ್ಲಿ ಖರೀದಿ ಮಾಡಲಾಗಿರುತ್ತದೆ. ಸರ್ವೆ ನಂಃ 75 ಮತ್ತು 77 ರಲ್ಲಿ ಬೋರವೆಲ್ಲ ಇರುವ ಬಗ್ಗೆ ಯಾವದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಬೇಕಾದಲ್ಲಿ ಹಾಜರುಪಡಿಸುತ್ತೇನೆಂದು ನುಡಿಯುತ್ತಾರೆ. ಸರ್ವೆ ನಂಃ 162/1 ಮತ್ತು 162/3 ರಲ್ಲಿ 2015 ರಲ್ಲಿ ಬೋರವೆಲ್ಲನ್ನು 2 ಮತ್ತು 3 ನೇ ಪ್ರತಿವಾದಿಯುರು ಹಾಕಿಸಿರುತ್ತಾರೆಂದರೆ ಸಾಕ್ಷಿಯು ಎಲ್ಲರೂ ಸೇರಿ ಹಾಕಿಸಿರುತ್ತೇವೆಂದು ನುಡಿಯುತ್ತಾರೆ. ಸರ್ವೆ ನಂಃ 162/1 ಮತ್ತು 162/3 ಗಳು 2 ಮತ್ತು 3 ನೇ ಪ್ರತಿವಾದಿಯರ ಹೆಸರಿನಲ್ಲಿವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಮೋಸ ಮಾಡಿ ಮಾಡಿಸಿಕೊಂಡಿರುತ್ತಾರೆಂದು ನುಡಿಯುತ್ತಾರೆ. ಕಟ್ಟಿ ಕುಟುಂಬದಲ್ಲಿ ಸುಮಾರು 30 ರಿಂದ 40 ಮಂದಿ ಇರುವ ದೊಡ್ಡ ಕುಟುಂಬ ಎಂದರೆ ಸರಿ. ತಾರೀಹಾಳದಲ್ಲಿರುವ ಕಟ್ಟಿ ಕುಟುಂಬದ ಜಮೀನುಗಳು ಎಲ್ಲವೂ ಮಸಾರಿ ಜಮೀನುಗಳೆಂದರೆ ಸಾಕ್ಷಿಯು ಯರಿ ಜಮೀನುಗಳು ಸಹ ಇರುತ್ತವೆಂದು ನುಡಿಯುತ್ತಾರೆ ನಿಖರವಾಗಿ ಎಷ್ಟು ಎಕರೆ ಯರಿ ಮತ್ತು ಎಷ್ಟು ಎಕರೆ ಮಸಾರಿ ಜಮೀನು ಎಂದು ಹೇಳಲು ಬರುವದಿಲ್ಲ. ಜಮೀನದಿಂದ ಬರೂ ಉತ್ಪನ್ನವು ವರ್ಷದ ಮನೆತನದ ಖರ್ಚಿಗೆ ಹಾಗೂ ಹಬ್ಬ ಹರಿದಿನಗಳಲ್ಲಿ ಬಟ್ಟೆ ತೆಗೆದುಕೊಳ್ಳಲು ಸಾಕಾಗುತ್ತದೆಂದರೆ ಸರಿಯಲ್ಲ ಸಾಕ್ಷಿಯು ಮುಂದುವರೆದು ಇದರಿಂದ ಸಾಕಷ್ಟು ಆಸ್ತಿ ಮಾಡಿರುತ್ತೇವೆಂದು ನುಡಿಯುತ್ತಾರೆ. ಯಾವ ಆಸ್ತಿಗಳನ್ನು ಖರೀದಿ ಮಾಡಲಾಗಿದೆ ಮತ್ತು ಎಷ್ಟನೇ ಇಸ್ವಿಯಲ್ಲಿ ಖರೀದಿ ಮಾಡಲಾಗಿದೆ ಎಂದರೆ ಸಾಕ್ಷಿಯು ಸರ್ವೆ ನಂಃ 55 , ಪ್ಲಾಟ ನಂಃ 144 , 49, 128 ಬಿ, ಸರ್ವೆ ನಂಃ 85 ರ ಪ್ಲಾಟ ನಂಃ 21, ಸರ್ವೆ ನಂಃ 37 ಹೊನ್ನಾಪೂರ ಗ್ರಾಮದ ಆಸ್ತಿಗಳನ್ನು ಖರೀದಿ ಮಾಡಲಾಗಿದೆ ಎಂದು

ನುಡಿಯುತ್ತಾರೆ. ಈ ಆಸ್ತಿಗಳನ್ನು ಎಷ್ಟು ಹಣಕ್ಕೆ ಯಾರಿಂದ ಯಾರು ಯಾವ ವರ್ಷದಲ್ಲಿ ಖರೀದಿ ಮಾಡಿರುತ್ತಾರೆಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ಮುಂದುವರೆದು ಸರ್ವೆ ನಂ: 90 ನ್ನು 2013 ರಲ್ಲಿ , ಮಲ್ಲಪ್ಪ ಕಟ್ಟಿ ರವರ ಮಗನ ಹೆಸರಿನಲ್ಲಿ ಖರೀದಿ ಮಾಡಲಾಗಿದ್ದು ಯಾವ ಕಾರಣಕ್ಕಾಗಿ ಎಂದು ಕೇಳಿದಾಗ ಮುಂದೆ ಎಲ್ಲರಿಗೂ ಮಾಡೋಣ ಎಂದು ಹೇಳಿರುತ್ತಾರೆ. ಈ ರೀತಿ ಮಾತುಕತೆಗಳನ್ನು ಖರೀದಿ ಪತ್ರದಲ್ಲಿ ನಮೂದಿಸಿರುವದಿಲ್ಲ. ಯಾರಿಂದ ಮೇಲೆ ತಿಳಿಸಿದ ಪ್ಲಾಟ ಮತ್ತು ಸರ್ವೆ ನಂಬರುಗಳನ್ನು ಖರೀದಿ ಮಾಡಲಾಗಿದೆ ಮತ್ತು ಯಾವ ವರ್ಷದಲ್ಲಿ ಖರೀದಿಸಲಾಗಿದೆ ಎಂಬ ಬಗ್ಗೆ ನನ್ನ ಅಸಲರ್ಜಿಯಲ್ಲಿ ಮತ್ತು ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಯಲಾಗಿದೆಯೋ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ. ಪ್ಲಾಟ ನಂ.128 ಪಿ ಮೂಲ ಮಾಲಕರು ಯಾರೆಂಬುದು ಗೊತ್ತಿಲ್ಲ. ಅದನ್ನು ಖರೀದಿಸಲು ಮಲ್ಲಪ್ಪ ಎಷ್ಟು ಹಣ ಕೊಟ್ಟರು ಎಂಬುದು ನನಗೆ ಗೊತ್ತಿಲ್ಲ. ಈ ದಾವೆಯನ್ನು ಹಾಕಿದ ನಂತರ ಶೆಡ್ಯೂಲ ಕ ನ 7 ನೇ ಕ್ರಮ ಸಂಖ್ಯೆಯಲ್ಲಿ ತೋರಿಸಿರುವ ಬ್ಲಾಕ ನಂ: 95 /1 ಬ ಆಸ್ತಿಯನ್ನು ಕಲಾವತಿ ಕಟ್ಟಿ ರವರು ಖರೀದಿ ಮಾಡಿರುತ್ತಾರೆಂದರೆ ಸಾಕ್ಷಿಯು ಮೊದಲೇ ಖರೀದಿ ಮಾಡಿರುತ್ತಾರೆಂದು ನುಡಿಯುತ್ತಾರೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಅದು ಯಾವಾಗ ನೋಂದಾಗಿರುತ್ತದೆಂದರೆ ಸಾಕ್ಷಿಯು ದಾಖಲೆ ನೋಡಿ ದಿನಾಂಕ : 05.10.2016 ಎಂದು ನುಡಿಯುತ್ತಾರೆ. ಸದರಿ ದಾಖಲೆಯು ಖರೀದಿ ಪತ್ರದ ನಕಲು ಪ್ರತಿಯಾಗಿದ್ದು ಅದನ್ನು ಗುರುತಿಸುವಿಕೆಯ ಉದ್ದೇಶದಿಂದ ಅದನ್ನು ನಿಐ 1 ಎಂದು ಗುರುತಿಸಲಾಯಿತು. ದಾವೆಯು ಹಾಕಿದ ನಂತರ ಮಾಡಿರುತ್ತಾರೆ ಅದನ್ನು ಸಹ ಬರೆದುಕೊಳ್ಳಿ ಎಂದು ನ್ಯಾಯಾಲಯಕ್ಕೆ ಸಾಕ್ಷಿಯು ನಿರ್ದೇಶನವನ್ನು ನೀಡಿರುತ್ತಾರೆ. ನಿಐ 1 ನ್ನು ಯಾರ ನಡುವೆ ಖರೀದಿ ವ್ಯವಹಾರ ಆಗಿದ್ದು ಎಷ್ಟು ಹಣಕ್ಕೆ ಆಗಿದೆ ಎಂದರೆ ಸಾಕ್ಷಿಯು ಕೊಚಲಾಪುರಮಠ ಎಂಬುವವರು ಮಾಲೀಕರಾಗಿದ್ದು 2001 ರಲ್ಲಿ ಖರೀದಿ ಮಾಡಲಾಗಿದೆ ಎಂದು 35 ಸಾವಿರ ಕೊಟ್ಟಿರುತ್ತಾರೆಂದು ನುಡಿಯುತ್ತಾರೆ. ನಿಐ 1 ರಲ್ಲಿ ಖರೀದಿ ವ್ಯವಹಾರವು ಎಷ್ಟು ಹಣಕ್ಕೆ ಆಗಿದೆ ಎಂದು ಉಲ್ಲೇಖಿಸಲಾಗಿದೆ ಎಂದರೆ 2 ಲಕ್ಷ 14 ಸಾವಿರ ಬರೆದಿರುತ್ತಾರೆಂದು ದಾಖಲೆಯನ್ನು ನೋಡಿ ನುಡಿದಿರುತ್ತಾರೆ. ಆದರೆ ಅದು ಸುಳ್ಳಾಗಿರುತ್ತದೆಂದು ಮುಂದುವರೆದು ನುಡಿಯುತ್ತಾರೆ. 2 ಲಕ್ಷ 14 ಸಾವಿರ ರೂ ಗಳನ್ನು ಕೊಟ್ಟಿಲ್ಲ ಎಂದು ತೋರಿಸಲು ತಮ್ಮ ಬಳಿ ಯಾವದಾದರೂ ದಾಖಲೆ ಇದೆಯಾ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ನಿಐ 1 ರಲ್ಲಿರುವ ಆಸ್ತಿಯನ್ನು ಕಲಾವತಿ ಕಟ್ಟಿ ರವರು

ಪ್ರಭಾಕರ ಲಕ್ಷ್ಮಣ ಶೇಟ ರವರ ಒಟ್ಟುಮೊಕ್ತಿಯಾರದಾರ ಮೋಹನ ಲಕ್ಷ್ಮಣ ಶೇಟ ರವರಿಂದ ಖರೀದಿಸಿರುತ್ತಾರೆಂದರೆ ಸಾಕ್ಷಿಯು ದಾಖಲೆ ನೋಡಿ ಹೌದು ಎನ್ನುತ್ತಾರೆ. ನಿಐ 1 ರಲ್ಲಿರುವ ಆಸ್ತಿಯು ಕಲಾವತಿ ಕಟ್ಟಿ ರವರ ವೈಯಕ್ತಿಕ ಹೆಸರಿನಲ್ಲಿದೆ ಎಂದರೆ ಸರಿ. ಈ ಆಸ್ತಿಯನ್ನು ಒಟ್ಟು ಕುಟುಂಬದ ಉತ್ಪನದಿಂದ ಖರೀದಿಸಲಾಗಿದೆ ಎಂದು ತೋರಿಸಲು ಯಾವದೇ ಕಾಗದ ಪತ್ರ ಹಾಜರುಪಡಿಸಿಲ್ಲ ಎಂದು ಸಾಕ್ಷಿಯು ಗೊತ್ತಿಲ್ಲ ಎಂದು ಬೇಕಾದಲ್ಲಿ ಹಾಜರುಪಡಿಸುತ್ತೇನೆಂದು ನುಡಿಯುತ್ತಾರೆ.

ಈ ಅವದಿಯಲ್ಲಿ ನ್ಯಾಯಾಲಯದ ಅವದಿಯು ಮುಗಿದ ಕಾರಣದಿಂದ ಪಾಟೀ ಸವಾಲಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.